| ಕ್ರಮ ಸಂಖ್ಯೆ | ಜಿಲ್ಲೆ | ಕೇಂದ್ರಗಳು | ಅಕ್ಷರಸ್ಥ ರಾದವರು | ಅಕ್ಷರಸ್ಥ ಮಹಿಳೆಯರು |
|---|---|---|---|---|
| 1 | ಬೆಂಗಳೂರು | 739 | 26240 | 13227 |
| 2 | ಬೆಳಗಾಂ | 1078 | 29648 | 14738 |
| 3 | ಬಳ್ಳಾರಿ | 904 | 20549 | 8297 |
| 4 | ಬೀದರ್ | 770 | 22410 | 12799 |
| 5 | ಬಿಜಾಪುರ | 1574 | 43995 | 19463 |
| 6 | ಚಿಕ್ಕಮಗಳೂರು | 688 | 19186 | 8885 |
| 7 | ಚಿತ್ರದುರ್ಗ | 987 | 18006 | 8284 |
| 8 | ದಕ್ಷಿಣ ಕನ್ನಡ | 725 | 15956 | 7691 |
| 9 | ಧಾರವಾಡ | 979 | 29109 | 12778 |
| 10 | ಗುಲ್ಬರ್ಗ | 1779 | 49388 | 27051 |
| 11 | ಹಾಸನ | 522 | 8768 | 4033 |
| 12 | ಕೊಡಗು | 416 | 9149 | 4427 |
| 13 | ಕೋಲಾರ | 1219 | 27132 | 13179 |
| 14 | ಮಂಡ್ಯ | 1091 | 22781 | 10539 |
| 15 | ಮೈಸೂರು | 907 | 13091 | 6090 |
| 16 | ರಾಯಚೂರು | 1674 | 41062 | 19283 |
| 17 | ಶಿವಮೊಗ್ಗ | 862 | 32859 | 15268 |
| 18 | ತುಮಕೂರು | 1001 | 27639 | 12803 |
| 19 | ಉತ್ತರ ಕನ್ನಡ | 584 | 8116 | 4196 |
| 20 | ಬೆಂಗಳೂರು ಪಟ್ಟಣ ಪ್ರದೇಶ | 177 | ... | ... |
| | ಒಟ್ಟು | 18706 | 466086 | 223126 |

## ಡಾಂಬರ ರಸ್ತೆಗಳ ವಿವರ

೧೩೨೨ (೧೬೨೭) ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ;—

ಅ) ರಾಜ್ಯ ಸರ್ಕಾರದ ಅಧೀನದಲ್ಲಿರುವ ಡಾಂಬರು ಹಾಗೂ ಡಾಂಬರು ಮಾಡದ ಜನ ಸಂಚರಿಸುವ ರಸ್ತೆಗಳ ಉದ್ದವೆಷ್ಟು?

ಆ) ಈ ರಸ್ತೆಗಳ ದುರಸ್ತಿಗಾಗಿ ಖರ್ಚು ಮಾಡುತ್ತಿರುವ ಹಣವೆಷ್ಟು?

ಇ) ಈ ರಸ್ತೆಗಳನ್ನು ಇಲಾಖೆ ಮೂಲಕ ದುರಸ್ತಿ ಮಾಡಿಸಲಾಗುತ್ತಿದೆಯೇ, ಇಲ್ಲವೆ ಗುತ್ತಿಗೆ ದಾರರ ಮೂಲಕ ಮಾಡಿಸಲಾಗುತ್ತಿದೆಯೆ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ೩೧-೩-೧೯೮೮ರಲ್ಲಿ ನಂತೆ ಇರುವ ರಸ್ತೆಗಳ ಒಟ್ಟು ಉದ್ದ ೭೭೦೫ ಕಿ. ಮಿ.

ಎ) ಲೋಕೋಪಯೋಗಿ ಇಲಾಖೆಯ ವಶದಲ್ಲಿ ೨೯. ೩೭೫ ಕಿ. ಮಿ.

ಬಿ) ಜಿಲ್ಲಾಪರಿಷತ್ತುಗಳ ವಶದಲ್ಲಿ ೪೭. ೭೮೪ ಕಿ. ಮಿ.

ಒಟ್ಟು ೭೭. ೧೫೯ ಕಿ. ಮಿ.

ಇದಕ್ಕೆ ಸಂಬಂಧಿಸಿದಂತೆ ಡಾಂಬರ್ ಹಾಗೂ ಡಾಂಬರ್ ಮಾಡದರಸ್ತೆಗಳ ಉದ್ದ ಈ ರೀತಿ ಇದೆ.

( ರಸ್ತೆಯ ಉದ್ದ ಕಿ. ಮಿ. ಗಳಲ್ಲಿ )

| ಕಾಂಕ್ರೀಟ್ ರಸ್ತೆ | ಡಾಂಬರ್ ರಸ್ತೆ | ಜಲ್ಲಿ ರಸ್ತೆ | ಕಚ್ಚಾ ರಸ್ತೆ | ಡಾಂಬರ್ ಮಾಡದ ರಸ್ತೆ ಒಟ್ಟು |
|---|---|---|---|---|
| ೩೪೧, | ೨೯, ೭೩೧, | ೩೦,೯೮೭, | ೧೬,೦೦೦, | ೭೭, ೦೫೯ |

ಆ) ಕಳೆದ ೩ ವರ್ಷಗಳಲ್ಲಿ ಈ ರಸ್ತೆಗಳ ದುರಸ್ತಿಗಾಗಿ ಖರ್ಚು ಮಾಡುತ್ತಿರುವ ಹಣದ ವಿವರ ಹಿಗಿದೆ:

| ಸಾಲು | ಖರ್ಚು (ಲಕ್ಷ ರೂಗಳಲ್ಲಿ) |
|---|---|
| ೧೯೮೫-೮೬ | ೩೧೨೭. ೦೦ |
| ೧೯೮೬-೮೭ | ೪೨೩೪. ೦೦ |
| ೧೯೮೭-೮೮ | ೩೩೩೧. ೫೬ |
| ೧೯೮೮-೮೯ | ೪೬೯೧. ೨೦ (ಅನುದಾನ) |

ಇ) ರಸ್ತೆಗಳ ಸಾಮಾನ್ಯ ದುರಸ್ತಿಯನ್ನು ಇಲಾಖಾ ಮಟ್ಟದಿಂದ ಮಾಡಲಾಗುತ್ತಿದೆ. ವಿಶೇಷ ದುರಸ್ತಿಯನ್ನು ಸನ್ನಿವೇಶ ಹಾಗೂ ಆವಶ್ಯಕತೆಗೆನುಗುಣವಾಗಿ ಇಲಾಖಾ ಮಟ್ಟದಿಂದ ಇಲ್ಲವೇ ಗುತ್ತಿಗೆದಾರರ ಮೂಲಕ ಮಾಡಿಸಲಾಗುತ್ತಿದೆ.

## ಮೈಸೂರಿನಲ್ಲಿರುವ ಗನ್ ಹೌಸ್ ಬಗ್ಗೆ

೧೩೭೩(೨೧೨೪) ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ ಕ್ಷೇತ್ರ).—ಮಾನ್ಯ ಕಂದಾಯ ಮತ್ತು ಯೋಜನೆ ಹಾಗೂ ಬಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಮೈಸೂರಿನಲ್ಲಿ ಪ್ರಾಚ್ಯವಸ್ತು ಕಟ್ಟಡಗಳು ಎಷ್ಟಿವೆ ಹಾಗೂ ಅವುಗಳನ್ನು ಪಟ್ಟಿಮಾಡಿ ಘೋಷಿಸಲಾಗಿದೆಯೇ ?

ಆ) ಅಂತಹ "ಪ್ರಾಚ್ಯ" ಬಾಬಿನಲ್ಲಿ ಸೇರುವ ಗನ್‌ಹೌಸ್‌ನ್ನು ಸಾಮಾನ್ಯವಾದ ಬಾರ್ ಆಗಿ ಪರಿವರ್ತಿಸಿ, ಅದರ ಮಹತ್ವ ಅಳಿಸುವ ಪ್ರಯತ್ನ ನಡೆದಿರುವುದು ನಿಜವೇ ?

ಇ) ಈ ಕೂಡಲೇ ಗನ್‌ಹೌಸ್‌ನ ಪ್ರಾಚೀನತೆಯನ್ನು ಅನುಲಕ್ಷಿಸಿ ಅಲ್ಲಿನ ಬಾರ್ ರದ್ದುಪಡಿಸಿ ರಕ್ಷಿಸಲು ಕ್ರಮ ಕೈಗೊಳ್ಳಲಾಗುವುದೇ ?

ಈ) ಇದೇ ರೀತಿ ಪ್ರಾಚೀನ ವಸ್ತುಗಳು ಹಾಗೂ ಕಟ್ಟಡಗಳನ್ನು ಪ್ರಾಚ್ಯವಸ್ತುಗಳ ಇಲಾಖೆ ಆಡಳಿತಕ್ಕೆ ಒಪ್ಪಿಸಲು ಕ್ರಮಕೈಗೊಂಡಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನೆ ಹಾಗೂ ಬಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು).—

ಅ) ಮೈಸೂರು ನಗರದಲ್ಲಿ ಒಟ್ಟು ೬೫ ಪುರಾತನ ಕಟ್ಟಡಗಳಿವೆ. ಅವುಗಳಲ್ಲಿ ಆರು ಕಟ್ಟಡಗಳು (ದೇವಸ್ಥಾನಗಳು) ಪ್ರಾಚೀನ ಸ್ಮಾರಕಗಳಾಗಿ ಘೋಷಿಸಲ್ಪಟ್ಟಿವೆ.

ಆ) ಗನ್ ಹೌಸ್ "ಪ್ರಾಚ್ಯ" ಕಟ್ಟಡವಾಗಿ ಪರಿಗಣಿಸಿಲ್ಲ.

ಇ) ಇದು ಶ್ರೀ ಶ್ರೀ ಕಂಠದತ್ತ ನರಸಿಂಹರಾಜ ಒಡೆಯರ್ ಅವರ ಖಾಸಗಿ ಕಟ್ಟಡವಾಗಿರುವುದರಿಂದ, ಇದರ ಬಗ್ಗೆ ಪ್ರಾಚ್ಯ ವಸ್ತು ಇಲಾಖೆಕ್ರಮ ತೆಗೆದುಕೊಳ್ಳಲು ಸಾಧ್ಯವಿಲ್ಲ.

ಈ) ಹೌದು. ಮೈಸೂರಿನಲ್ಲಿ ವೆಲ್ಲಿಂಗ್ ಟನ್ ಲಾಡ್ಜ್‌ನ್ನು ಪುರಾತನ ಸ್ಮಾರಕವನ್ನಾಗಿ ಘೋಷಿಸಲು ಕ್ರಮ ಕೈಗೊಂಡಿದ್ದು ಸಾರ್ವಜನಿಕರಿಂದ ಅಕ್ಷೇಪಣೆಗಳೇನಾದರೂ ಇದ್ದಲ್ಲಿ ಕರೆಯಲಾಗಿದೆ.

## ವಾಣಿಜ್ಯ ಪರೀಕ್ಷೆ ಮೌಲ್ಯಮಾಪನ ಹೆಚ್ಚಿಸುವುದು

೧೩೭೪ (೧೬೫೩) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ: —